


**ಗುರುಪ್ರಸಾದ ಕಾಗಿನೆಲೆ**

ಪುಟ್ಟನ ಸೈನ್ಸ್ ಫೇರ್ ಪ್ರಾಜೆಕ್ಟಿಗೆ ಕೆಲಸ ನಡೆದಿತ್ತು. ಪ್ರತಿವರ್ಷ ಬರುವ ಈ ಸೈನ್ಸ್ ಫೇರ್ ಪ್ರಾಜೆಕ್ಟು ಒಂದು ದೊಡ್ಡ ತಲೆನೋವು. ಮಕ್ಕಳಿಗಿಂತಾ ಅಪ್ಪ, ಅಮ್ಮಂದಿರಿಗೇ ಕೆಲಸ ಜಾಸ್ತಿ. ಮಗ ಈ ವರ್ಷ ರಾಷ್ಟ್ರಮಟ್ಟದ ಐಟ್ರಿಪಲ್ಲೀ ವಿಜ್ಞಾನ ಸಮ್ಮೇಳನಕ್ಕೆ ಆಯ್ಕೆಯಾಗಲೇ ಬೇಕೆಂದು ನಾವಿಬ್ಬರೂ ಬಹಳ ಪ್ರಯತ್ನ ಮಾಡುತ್ತಲಿದ್ದೆವು. ಪುಟ್ಟನ ಶಿಕ್ಷಕರೆಲ್ಲರೂ ಮಕ್ಕಳೇ ಈ ಪ್ರಯೋಗವನ್ನು ಮಾಡಬೇಕು, ಅಪ್ಪ ಅಮ್ಮಂದಿರು ಸಹಾಯ ಮಾತ್ರ ಮಾಡಬೇಕು, ಪೂರಾ ಪ್ರಯೋಗವನ್ನು ಅವರೇ ಮಾಡೋ ಹಾಗಿಲ್ಲ, ಎಂದು ಹೇಳಿದ್ದರೂ ನಾವು ದೇಸೀ ಅಪ್ಪ ಅಮ್ಮಂದಿರು ಕೇಳಬೇಕಲ್ಲ.

ಪುಟ್ಟನನ್ನು ಏನು ಪ್ರಯೋಗ ಮಾಡ್ತೀಯೋ ಎಂದು ಕೇಳಿದಾಗ ಒಂದು ಹತ್ತು ನಿಮಿಷ ಇಂಟರ್ನೆಟ್ಟಿನಲ್ಲಿ ಹುಡುಕಿದ ಹಾಗೆ ಮಾಡಿ, 'ವೈ ಕಂಪೇರ್ ಆಪಲ್ಸ್ ಅಂಡ್ ಆರೆಂಜಸ್. ಸೇಬು, ಕಿತ್ತಳೆ ಹೋಲಿಕೆ ಯಾಕೆ? ನಮ್ಮ ಜಿಹ್ವಾರಸ ನಿಜವಾಗಿಯೂ ಸೇಬನ್ನು ಮತ್ತು ಕಿತ್ತಳೆಯನ್ನು ಪ್ರತ್ಯೇಕಿಸಿ ನೋಡುವಷ್ಟು ಚುರುಕಾಗಿದೆಯೇ ಅಂತ ಪರೀಕ್ಷೆ ಮಾಡ್ತೀನಿ' ಅಂದ. 'ಹೆಂಗೆ ಮಾಡ್ತೀಯೋ' ಎಂದಾಗ 'ಹತ್ತು ಜನಕ್ಕೆ ಕಣ್ಣಿಗೆ ಬಟ್ಟೆ ಕಟ್ಟಿ ಮೊದಲು ಸೇಬಿನ ರಸ ಕುಡಿಸೋದು, ಆಮೇಲೆ ಅದೇ ಹತ್ತು ಜನಕ್ಕೆ ಕಿತ್ತಳೆ ರಸ ಕುಡಿಸೋದು. ವಾಸನೆ ಗೊತ್ತಾಗದ ಹಾಗೆ ಮೂಗಿಗೆ ಕ್ಲಿಪ್ ಹಾಕೋದು, ಅಕಸ್ಮಾತ್ ಬಟ್ಟೆ ಸಂದಿಯಿಂದ ನೋಡಿದ್ರೆ ಗೊತ್ತಾಗೋದೇ ಇರೋಕ್ಕೆ ಫುಡ್ ಕಲರಿಂಗ್ ಹಾಕಿ ಎರಡೂ ಹಣ್ಣಿನ ರಸಗಳೂ ಒಂದೇರೀತಿ ಕಾಣುವ ಹಾಗೆ ಮಾಡೋದು,' ಅಂದ. 'ಆಮೇಲೆ ಯಾವುದು ಯಾವ ರಸ ಅಂತ ಕೇಳೋದು' ಅಂದ. ನನಗೆ ಪರವಾಗಿಲ್ಲವೇ ಅಂತನಿಸಿತು. ಆದರೆ ಇವಳಿಗೆ ಪುಟ್ಟ ಎಡವಟ್ಟೆನಿಸಿ ಸಿಟ್ಟೇ ಬಂದು ಬಿಟ್ಟಿತ್ತು. 'ಆ ನಮ್ರತಾಳ ಮಗ ಥ್ರೀಡಿ ಪ್ರಿಂಟರ್ ಮಾದರಿ ಮಾಡಿದಾನಂತೆ, ಮೆಹ್ತಾ ಮಗಳು ಮೆಡಿಟೇಶನ್‌ಗೆ ಅಂತಾನೇ ಒಂದು ಆ್ಯಪ್ ಮಾಡಿದಾಳಂತೆ, ಇನ್ನು ಆ ಚೈನೀ ಹುಡುಗರು ಏನೇನು ಮಾಡ್ತಾರೆ ಅಂತ ನಮಗೆ ಅರ್ಥವೂ

